ವಿಷಯ:- ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳ ಸಂಖ್ಯೆ.

1395 (2061) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿದ್ಯಾರ್ಥಿನಿಯರಿಗಾಗಿಯೇ ಇರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು?

ಆ) ಈ ಹಾಸ್ಟೆಲ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು? ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಹಾಸ್ಟೆಲ್‌ಗಳಲ್ಲಿ ಇರಲು ಕಾರಣಗಳೇನು?

ಇ) ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಿಗೆ ಸೌಕರ್ಯಗಳನ್ನು ಹೆಚ್ಚಿಸಿ, ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಸ್ಟೆಲ್ ಸೇರುವಂತೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗಾಗಿ 282 ವಿದ್ಯಾರ್ಥಿನಿಲಯಗಳು ಇರುತ್ತವೆ. ವಿವರ ಕೆಳಕಂಡಂತಿದೆ:-

1) ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	245
2) ಅನುದಾನಿತ ವಿದ್ಯಾರ್ಥಿ ನಿಲಯಗಳು	15
3) ಕಾಲೇಜು ವಿದ್ಯಾರ್ಥಿ ನಿಲಯಗಳು	19
4) ಮಾನ್ಯತೆ ಪಡೆದ ಖಾಸಗಿ ಕಾಲೇಜು ವಿದ್ಯಾರ್ಥಿ ನಿಲಯಗಳು	3
	282

ಆ) ಈ ಹಾಸ್ಟೆಲ್‌ಗಳಲ್ಲಿ ಒಟ್ಟಾರೆ ಮಂಜೂರಾತಿ ಸಂಖ್ಯೆ 13,891 ವಿದ್ಯಾರ್ಥಿನಿಯರಿಗಾಗಿ ಇದ್ದು, ಪ್ರಸಕ್ತ ಸಾಲಿನಲ್ಲಿ 12,309 ವಿದ್ಯಾರ್ಥಿನಿಯರ ಸಂಖ್ಯೆ ಭರ್ತಿಯಾಗಿರುತ್ತದೆ. ಮಲೆನಾಡು ಪ್ರದೇಶದ ಜಿಲ್ಲೆಗಳಾದ ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶಾಲೆಗೆ ದಾಖಲಾಗುವ ಪ.ಜಾತಿ : ಪ.ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗಿರುತ್ತದೆ.

ಇ) ಇದೆ. ವಿದ್ಯಾರ್ಥಿ ನಿಲಯಗಳಲ್ಲಿ ಪೂರ್ಣ ಸಂಖ್ಯೆಯಲ್ಲಿ ಪ್ರವೇಶ ಹೊಂದುವಂತೆ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಹಾಲಿ ನೀಡುತ್ತಿರುವ ಊಟ, ತಿಂಡಿ, ಮತ್ತು ಇತರ ಸೌಲಭ್ಯಗಳನ್ನು ಹೆಚ್ಚಿಸಲು ಯೋಜಿಸಲಾಗುತ್ತಿದೆ. ಉತ್ತಮವಾದ ಬೋಧನೆಯನ್ನು ನೀಡುವ ಬಗ್ಗೆಯೂ ಸಹ ಏರ್ಪಾಟನ್ನು ಮಾಡಲಾಗುವುದು ಹಾಗೂ ಹೊಸ ವಿದ್ಯಾರ್ಥಿ ನಿಲಯಗಳನ್ನು ತೆರೆಯುವಾಗ ಶೇ. 30ರಷ್ಟು ವಿದ್ಯಾರ್ಥಿನಿಯರಿಗಾಗಿ ನಿಲಯಗಳನ್ನು ಕಡ್ಡಾಯವಾಗಿ ತೆರೆಯಲಾಗುತ್ತಿದೆ.

ವಿಷಯ:- ಮೈಸೂರ್ ಲ್ಯಾಂಪ್ಸ್ ಖಾಸಗೀಕರಣ

1397 (1749) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ

ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಖಾಸಗಿಯವರಿಗೆ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಈ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು? ಇವರ ಸಂಬಳ ಪ್ರತಿ ತಿಂಗಳಿಗೆ ಆಗುವ ಖರ್ಚೆಷ್ಟು?

ಇ) ಈ ಕಾರ್ಖಾನೆಗೆ ಚರಾಸ್ಥಿ ಮತ್ತು ಸ್ಥಿರಾಸ್ಥಿಗಳು ಎಷ್ಟು ಇದೆ?

ಈ) ಈ ಕಾರ್ಖಾನೆಯು ನಷ್ಟ ಅನುಭವಿಸಲು ಕಾರಣವೇನು, ಆಗಿರುವ ನಷ್ಟವನ್ನು ತುಂಬಿ ಖಾಸಗಿಯವರಿಗೆ ನೀಡದೇ ಸರ್ಕಾರವೇ ನಡೆಸಿಕೊಂಡು ಹೋಗಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್.ವಿ. ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) ಮೈಸೂರ್ ಲ್ಯಾಂಪ್ ವರ್ಕ್ಸ್ ನಿಯಮವನ್ನು ಸಮರ್ಥವಾಗಿ ನಡೆಸುವಂತಹ ಸೂಕ್ತ ಲ್ಯಾಂಪ್ ಕಾರ್ಖಾನೆಗೆ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದಲ್ಲಿರುವ ಸರ್ಕಾರ ಹಾಗೂ ಎನ್.ಜಿ.ಇ.ಎಫ್ ನಿಯಮಿತ ಹೊಂದಿರುವ ಷೇರುಗಳನ್ನು ಭಾಗಶಃ ಅಥವಾ ಪೂರ್ಣವಾಗಿ ಮಾರಲು ಸರ್ಕಾರವು ಅನುಮತಿ ನೀಡಿರುತ್ತದೆ.

ಆ) ಕಾರ್ಮಿಕರ ಸಂಖ್ಯೆ: 1836, ಸಂಬಳದ ಖರ್ಚು 1.06 ಕೋಟಿ ರೂ.ಗಳು.

ಇ) ಚರಾಸ್ಥಿ –8.33 ಕೋಟಿ ರೂ.ಗಳು.

ಸ್ಥಿರಾಸ್ಥಿ –14.66 ಕೋಟಿ ರೂ.ಗಳು

ಈ) ಕಾರ್ಖಾನೆಯು ನಷ್ಟ ಅನುಭವಿಸಲು ಕಾರಣಗಳು:

1) ಏರುತ್ತಿರುವ ಪದಾರ್ಥಗಳ ಬೆಲೆ ಮತ್ತು ಮೇಲುವರಿ ವೆಚ್ಚಗಳಿಂದಾಗಿ ಪದಾರ್ಥಗಳ ನಿವ್ವಳ ವಸೂಲಾತಿಯಲ್ಲುಂಟಾದ ಕುಸಿತ.

2) ತುಂಬಾ ಹಳೆಯದಾದ ಯಂತ್ರಗಳಿರುವುದರಿಂದ ಉಂಟಾದ ಹೆಚ್ಚಿನ ಕಾರ್ಮಿಕರ ಅವಶ್ಯಕತೆ ಮತ್ತು ಸಾಮಗ್ರಿಗಳ ಉಪಯೋಗದಲ್ಲಿ ಅಧಿಕ ಅಪವ್ಯಯ.

3) ಕಾರ್ಯಾಚರಣೆ ಬಂಡವಾಳದ ತೀವ್ರ ಕೊರತೆಯಿಂದ ಉತ್ಪಾದನಾ ಸಾಲುಗಳ ಸ್ಥಗಿತ ಮತ್ತು

4) ಬಹುರಾಷ್ಟ್ರೀಯ ಸಂಸ್ಥೆಗಳಿಂದ ಪೈಪೋಟಿ.

ಆಸಕ್ತಿಯುಳ್ಳ ಉದ್ದಿಮೆದಾರರಿಂದ ಉತ್ತಮ ಪ್ರಸ್ತಾವನೆಗಳನ್ನು ನಿರೀಕ್ಷಿಸಿ ಸಂಸ್ಥೆಯು ತನ್ನ ಉತ್ಪಾದನಾ ಚಟುವಟಿಕೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರವು ಇತ್ತೀಚೆಗೆ ತನ್ನ ಒಪ್ಪಿಗೆಯನ್ನು ನೀಡಿದೆ.